ಕಾನೂನು ಸಲಹಾ ಮಂಡಲಿ (ತಿದ್ದುಪಡಿ * ವಿಧೇಯಕ 1983ನ್ನು ಸಭೆಯು ಅನುಮೋದಿಸುತ್ತದೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ : ಕರ್ನಾಟಕ ಕಾನೂನು ಸಲಹಾ ಮಂಡಳಿ (ತಿದ್ದುಪಡಿ) ವಿಧೇಯಕ 1983ನ್ನು ಸಭೆಯು ಅನುಮೋದಿಸುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟು ವಿಧೇಯಕವು ಅನುಮೋದಿಸಲಾಯಿತು.

ANNOUNCEMENT
By Panal of Chairmen

MR. DEPUTY SPEAKAR.—Under rule 9 of the Rules of Procedure and Conduct of Business in the Legislative Assembly, I nominate the following Members to the panel of Chairmen of the current session.

1. Sri N, Huchmasty Gowda.
2. Sri B. G. Banakar.
3. Sri H. Nagan Gowda.
4. Sri H. Gangadharan.
5. Sri G. P. Vadeyaraj.
6. Sri P. Ramdev.

MR. DEPUTY SPEAKER.—We will take up the next Bill.

THE KARNATAKA ECUCATIONAL INSTITUTIONS (PROHIBITION OF CAPITATION FEE) BILL, 1983
Motion to consider

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಉಪಾಧ್ಯಕ್ಷರೇ, ಈ ಕ್ಯಾಪಿಟೇಷನ್ ಫೀ—ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಮತ್ತು ಇತರ ವಿದ್ಯಾ ಸಂಸ್ಥೆಗಳಲ್ಲಿ ಈ ಶುಲ್ಕವನ್ನು ತೆಗೆದುಕೊಳ್ಳುವ ಪದ್ಧತಿ ಹೋಗಬೇಕು ಎನ್ನುವ ಸರ್ವಮಾನ್ಯವಾದ ಅಭಿಪ್ರಾಯವನ್ನು ಸರ್ಕಾರ ಗಮನಕ್ಕೆ ತೆಗೆದು ಕೊಂಡು ಇದನ್ನು ತೆಗೆದುಹಾಕಬೇಕೆಂಬ ಪ್ರಯತ್ನ ಈ ಮಸೂದೆಯಲ್ಲಿ ಅಡಕವಾಗಿದೆ. ಇದರಲ್ಲಿ ಈ ಕ್ಯಾಪಿಟೇಷನ್ ಶುಲ್ಕವನ್ನು ಯಾವ ರೀತಿಯಿಂದ ತೆಗೆದುಹಾಕಬೇಕು, ಮತ್ತು ಈ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳತಕ್ಕಂಥ ಆಯಾಯ ಸಂಸ್ಥೆಗಳನ್ನು ನಿಗಾದಲ್ಲಿ ಇಟ್ಟುಕೊಂಡು ಬಂದಿರತಕ್ಕಂಥ ಹಣವನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕು, ಹೇಗೆ ಖರ್ಚು ಮಾಡಬೇಕು ಎಂಬುದರ ಬಗ್ಗೆ ನಿಯಂತ್ರಣಗಳು ಕೂಡ ಇದರಲ್ಲಿ ಸೂಚಿತವಾಗಿವೆ. ಈ ರೀತಿಯ ತಪ್ಪುಗಳನ್ನು ಮಾಡಿದ್ದರೆ. ಅವರ ಕೃತ್ಯಗಳಿಗೆ ಅವರು ಹೇಗೆ ಶಿಕ್ಷಾರ್ಹರಾಗುತ್ತಾರೆ ಎನ್ನತಕ್ಕಂಥ ವಿಷಯ ಕೂಡ ಈ ಮಸೂದೆಯೊಳಗೆ ಅಡಕವಾಗಿದೆ. ಆ ಬಳಿಕ ಈ ವಿಧೇಯಕ ರಿಲಿಜಿಯಸ್ ಮತ್ತು ಲಿಂಗ್ವಿಸ್ಟಿಕ್ ಮೈನಾರಿಟೀಸ್‌ನವರು, ನಡೆಸತಕ್ಕಂಥ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ ಎನ್ನತಕ್ಕಂಥ ಅಂಶವನ್ನು ಇದರಲ್ಲಿ ನಿವೇದಿಸಲಾಗಿದೆ. ಒಟ್ಟಿನಲ್ಲಿ ಈ ಕ್ಯಾಪಿಟೇಷನ್ ಫೀ ಪಿಡುಗು ಹೋಗಬೇಕು. ಇದನ್ನು ಅತಿ ಶೀಘ್ರವಾಗಿ ಸಂಪೂರ್ಣವಾಗಿ ತೊಡೆದುಹಾಕಬೇಕು ಎನ್ನುವುದು ಇಲ್ಲಿಯ ಉದ್ದೇಶವಾಗಿದೆ. ಇದನ್ನು ಹಂತ ಹಂತವಾಗಿ ತೆಗೆದು ಹಾಕಬೇಕಾದರೆ ಹೇಗೆ ತೆಗೆಯಬೇಕು, ಎನ್ನುವ ವಿಚಾರದಲ್ಲಿ ಸರ್ಕಾರಕ್ಕೆ ಈ ವಿಧೇಯಕದ ಮೂಲಕ ಅಧಿಕಾರವನ್ನು ತೆಗೆದುಕೊಳ್ಳಬೇಕಾಗಿದೆ. ಇದರಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾದ ವಿಚಾರ ; Sir, the power is taken over by the Government under various clauses of this Bill to prohibit collection of capitation fee and regulation of accounts of the Institutions. Anyone of the Institutions which come under the purview of this Bill, if it transgress the rules and regulations and orders passed under this will be liable for penalty. The main thrust of the Bill is prohibition of collection of capitation fee and to regulate the accounts and certain other matters connected with it. Clause 14 of the said Bill empowers the Government to prescribe by rules all or any of the matter to carry out the purposes of the Act. I hope, this is a Bill, which every Member of this House would welcome. There is demand from all the sections of the society in our State that